ಶ್ರೀ ಎಸ್. ಎಂ. ಯಾಹ್ಯಾ.--ಇದನ್ನು ಹ್ಯುಮ್ಯಾನಿಟೇರಿಯನ್ ಕನ್ಸಿಡರೇಷನ್ ಮೇಲೆ ಮಾಡಬೇಕಾಗುತ ದೆ. ಇದಕ್ಕೆ ರೂಲ್ಸ್‌ಫ್ರೇಂಜ್ ಮಾಡಬೇಕಾಗಿರುವುದರಿಂದ ಸ್ವಲ್ಪ ತಡವಾಗಿದೆ. ಟಿ. ಸಿ. ಹೆಚ್ ಮಾಡಿಕೊಂಡಿರುವವರಿಗೆ ಫಸ್ಟ್ ಡಿವಿಜನ್ ಟೀಚರ್ಸ್ ಎಂದು ಕೊಡುತ್ತೇವೆ. ಟಿ. ಸಿ. ಹೆಚ್ ಮಾಡಿಕೊಳ್ಳದೇ ಇರುವವರಿಗೆ ಸೆಕೆಂಡ್ ಡಿವಿಜನ ಟೀಚರ್ಸ್ ಎಂದು ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

Amount provided for Relief Works in 1976-77

436 SRI K. H. HANUME GOWDA (Hassan).—Will the Minister for Revenue be pleased to state :—

(*a*) the names of the Districts in the State which were affected by scarcity during 1973 ;

(*b*) the number of Agricultural Lab urers and Ryots who were affected by it ;

(*c*) the dates on which the amount was spent by the Government in order to obviate the difficulties of people and cattle ;

(*d*) the names of the Districts in the State where people and cattle were affected by the scarcity due to failure of rains during 1976 ;

(*e*) the number of Agricultural labourers and the Ryots and the Districts which are affected by scarcity ;

(*f*) the dates and the amount provided by the Government for relief works during this year (the Districtwise figures may please be furnished) ?

SRI K. H. PATIL (Minister for Food and Forests)
[On behalf of SRI N. HUTCHAMASTHY GOWDA (Minister for Revenue]

(*a*) The scarcity condition prevailed in eight Districts, *viz.*, Bijapur, Bidar, Gulbarga, Belgaum, Raichur, Bellary, Chitradurga, and Dharwar.

(*b*) 8,202 lakhs of people were affected.

(*c*) A sum of Rs 2,407-96 lakhs was spent under "64 Famine Relief" during 1973-74.

(*d*) 18 Districts were affected by scarcity as per the information available on 1-2-1977, the details are furnished in Annexure I placed on the Table of the House**

(*e*) About 12.59 lakhs agricultural labourers and Ryots were affected. The details are furnished in Annexure II placed on the Table of the House.**

** Copies placed in the Karnataka Legislature Library *vide* No. 49/dated 20th July 1977.

(*f*) A sum of Rs. 3,166.22 lakhs, in all, was provided for relief works during 1976-77. The Districtwise details are furnished in Annexure III placed on the Table of the House.**

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, 1976-77ನೇ ಸಾಲಿಗೆ 64ನೇ ಫ್ಯಾಮಿನ್ ಹೆಡ್‌ನಲ್ಲಿ ಕ್ಷಾಮ ಪರಿಹಾರ ಕಲಸಗಳಿಗಾಗಿ ಸುಮಾರು 31 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ತಿಳಿಸಿದ್ದೀರಿ ಇದರಲ್ಲಿ ಎಷ್ಟು ಹಣ ಖರ್ಚಾಗಿದೆ, ಮತ್ತು ಎಷ್ಟು ಹಣ ಉಳಿದಿದೆ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಕೆ. ಎಚ್. ಪಾಟೀಲ್.—ಇದರಲ್ಲಿ ಉಳಿಯುವ ಪ್ರಶ್ನೆಯೇ ಇಲ್ಲ. ಒಟ್ಟು ಹಣ ಬೇಡಿದ್ದು ಎಷ್ಟು ಎಂಬುದು ಮಾತ್ರ ಇದೆ. ಆದರೆ ಕೊಟ್ಟಿದ್ದರಲ್ಲಿ ಎಷ್ಟು ಖರ್ಚಾಗಿದೆ ಎನ್ನುವ ವಿವರಗಳು ಇಲ್ಲ.

ಶ್ರೀ ಕೆ ಎಚ್. ಹನುಮೇಗೌಡ.—ಇಲ್ಲಿ ಬಂದಿರುವ ತೊಂದರೆ ಏನೆಂದರೆ, ಇಷ್ಟು ಹಣವನ್ನು ಈ ಸಾಲಿಗೆ ಖರ್ಚುಮಾಡಬೇಕೆಂದು ಸರ್ಕಾರ ಒದಗಿಸಿದರೂ ಕೂಡ ಅಧಿಕಾರಿಗಳು ಸಕಾಲದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳದೆ ಇದ್ದುದರಿಂದ ಹಣ ಲ್ಯಾಪ್ಸ್ ಆಗಿದೆ ಎಂದು ತಿಳಿದು ಬಂದಿದೆ. ಯಾವ ಅಧಿಕಾರಿಗಳು ಸಕಾಲದಲ್ಲಿ ಕ್ರಮ ತೆಗೆದುಕೊಳ್ಳದೆ ಈ ರೀತಿ ಹಣ ಲ್ಯಾಪ್ಸ್ ಆಗುವುದಕ್ಕೆ ಕಾರಣರಾಗಿದ್ದಾರೋ ಅವರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಕೆ. ಎಚ್. ಪಾಟೀಲ್.—ಎಷ್ಟು ಕಲಸವಾಗಿದೆಯೋ ಅಷ್ಟು ಹಣ ಖರ್ಚಾಗಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ. ಅಧಿಕಾರಿಗಳಿಗೆ ಹಣವನ್ನು ಕೊಟ್ಟು ಲಾರಿಗಳನ್ನು ಒದಗಿಸಿ ದನಗಳಿಗೆ ಮುಫತ್ತಾಗಿ ಮೇವನ್ನು ತರಿಸಿಕೊಡಬೇಕೆಂದು ಹೇಳಿದ್ದರೂ ಅವರು ತರಿಸಿಕೊಟ್ಟಿಲ್ಲ. ಸಬ್-ಡಿವಿಜನ್ ಇಂಜಿನಿಯರ್‌ಗಳ ಆಫೀಸ್‌ನಲ್ಲಿ ನೂರಾರು ಅರ್ಜಿಗಳು ಬಂದು ಬಿದ್ದಿವೆ. ಅನುಕೂಲವಿದ್ದರೂ ಅಧಿಕಾರಿಗಳೇ ಕ್ರಮ ತೆಗೆದುಕೊಂಡಿಲ್ಲವೆಂದು ನಮ್ಮ ಗಮನಕ್ಕೆ ಬಂದಿದೆ. ಹುಲ್ಲನ್ನು ಹೇರುವ ಬಗ್ಗೆ ಎಷ್ಟು ಹಣ ಒದಗಿಸಿದೆ, ಎಷ್ಟು ಖರ್ಚಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಐ ವಾಂಟ್ ನೋಟೀಸ್

ಶ್ರೀ ಎಸ್. ಬಂಗಾರಪ್ಪ.—ಬರಗಾಲ ಕಾಮಗಾರಿಗೋಸ್ಕರ ಎರಡೂವರೆ ತಿಂಗಳ ಹಿಂದೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಯಾವ ಯಾವ ಜಿಲ್ಲೆಗಳು ಕ್ಷಾಮಕ್ಕೆ ತುತ್ತಾಗಿವೆ ಆ ಜಿಲ್ಲೆಗಳಿಗೆ ಕೊಡಬೇಕೆಂದು ಕೊಟ್ಟಿದ್ದರೂ ಕೆಲವು ಜಿಲ್ಲೆಗಳಿಗೆ ಹಣ ಮುಟ್ಟಿಲ್ಲ. ಉದಾಹರಣೆಗೆ ಹೇಳುವುದಾದರೆ ನಮ್ಮ ಶಿಕಾರಿಪುರ ತಾಲ್ಲೂಕಿಗೆ ಹಣ ಬಂದಿಲ್ಲ. ಅಲ್ಲಿ ಯಾವ ಕೆಲಸವೂ ಆಗಿಲ್ಲ. ಇದನ್ನು ಪರಿಶೀಲಿಸಿ ಈಗಲಾದರೂ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಯಾವ ಯಾವ ತಾಲ್ಲೂಕಿಗೆ ನಾವು ಕೊಟ್ಟಿರುವ ಹಣ ಮುಟ್ಟಿಲ್ಲ ವೆಂಬುದನ್ನು ಮಾನ್ಯ ಸದಸ್ಯರು ನಮಗೆ ಪತ್ರ ಬರೆದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಕೆ. ಎಚ್. ಹನುಮೇಗೌಡ —ಸ್ವಾಮಿ, ಇಲ್ಲಿ ಒದಗಿಸಿರುವ 31 ಕೋಟಿ 66 ಲಕ್ಷ ರೂಪಾಯಿಗಳಲ್ಲಿ ಕೇಂದ್ರ ಸರ್ಕಾರದ ಹಣ ಎಷ್ಟು ? ಮತ್ತು ರಾಜ್ಯ ಸರ್ಕಾರದ ಹಣ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ನಾವು ಬೇಡಿದ್ದು 21 ಕೋಟಿ 30 ಲಕ್ಷ ರೂಪಾಯಿ. ಅದರಲ್ಲಿ ಎಷ್ಟು ಬಂದಿದೆ ಎಂಬ ಅಂಕಿ ಅಂಶ ನನ್ನಲ್ಲಿಲ್ಲ.

** Copies placed in the Karnataka Legislature Library *vide* No 49 dated 20th July 1977.

ಶ್ರೀ ಕೆ.ಎಚ್. ಹನುಮೇಗೌಡ.—1976—77ರಲ್ಲಿ ಬರಗಾಲ ಬಂದಿದ್ದಾಗ ಅಂತರಾಷ್ಟ್ರೀಯ ವಾಗಿ ದಾನದ ರೂಪದಲ್ಲಿ ಸಹಾಯವನ್ನು ಪಡೆಯುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದಿರಾ ? ಹಾಗೆ ಮಾಡಿದ್ದರೆ ಅದರ ಬಗ್ಗೆ ಎಷ್ಟು ಹಣ ಬಂತು ?

ಶ್ರೀ ಕೆ. ಎಚ್. ಪಾಟೀಲ್.—ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಈಸಾರಿ ಎಲ್ಲೆಲ್ಲಿ ಮಳೆ-ಬೆಳೆ ಆಗಿಲ್ಲ ಅಂಥ ಕಡೆ ರಿಲೀಫ್ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲೆಲ್ಲ ಮಳೆ-ಬೆಳೆಯಾಗಿಲ್ಲ ಅಂಥ ಕಡೆ ರಿಲೀಫ್ ಕಾಮಗಾರಿ ಗಳನ್ನು ಮೊದಲು ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

Exempting installation of capacitors for 5 HP and above, pumpsets, Mills and factories.

502. SRI K. M. DORESWAMY NAIDU (Sethamangala).—Will the Minister of State for Information and Power be pleased to state :—

(*a*) whether the Government would take action to exempt the installation of capacitors for 5 H. P. and above pumpsets, mills and factories since 5 H. P. and below pumpsets are exempted from the installation of capacitors ;

(*b*) whether representations have been received from the ryots for cancellation of capacitors and imposition of monthly penality. Since the ryots have no capacity to instal the capacitors.

(*c*) whether the Government would take action to refund the penalty amount imposed and adjust the same towards the electricity charges ;

(*d*) the amount of disconnection and re-connection charges for the pumpsets ?

SRI B SUBBAIAH SHETTY (Minister of State for Information and Power).—

(*a*) It is a fact that only I. P. sets with a connected load of 5 H. P. and below have been exempted from installation of shunt capacitors There is no proposal to extend such exemption to other I P. Sets and industrial consumers whose connected load is above 5 H. P. because the power loss in such cases is more and such consumers can afford to instal shunt capacitors.

(*b*) Yes.

(*c*) This will be examined.